ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ನೀರಾವರಿ ಮಂತ್ರಿಗಳು ಇರುವುದರಿಂದ ನಾನು ತಮ್ಮ ಮುಖಾಂತರ ಅವರಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್‌ಗಾಗಿ ಏನೊಂದು ಇಲಾಖೆ ಇದೆ ಅದನ್ನು ತಾವು ಒಂದು ಸಾರಿ ರಿವ್ಯೂ ಮಾಡಿದರೆ ಒಳ್ಳೆಯದೆನಿಸುತ್ತದೆ. ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಇಲಾಖೆಯ ಕೆಲಸ ತೃಪ್ತಿದಾಯಕವಾಗಿದೆ ಎಂದು ಮಾನ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಅವರಿಂದ ಉತ್ತರ ಬಂದಿದ್ದೂ ಆ ಮಂತ್ರಿಗಳು ಮಾತ್ರ ಇಲ್ಲಿಲ್ಲ. ಮಾನ್ಯ ವಿರೋಧಪಕ್ಷದ ಉಪನಾಯಕರಾದ ಮಾನ್ಯ ಸಿಂಧ್ಯರವರಿಗೂ, ನನಗೂ ಅವರು ಉತ್ತರವನ್ನು ಕೊಟ್ಟಿದ್ದಾರೆ. ಆದರೂ ಮಾನ್ಯ ಉಪ ಮುಖ್ಯಮಂತ್ರಿಗಳು ಈ ಇಲಾಖೆಯನ್ನು ಒಮ್ಮೆ ರಿವ್ಯೂ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ : (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೇ, ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಇಲಾಖೆಯನ್ನು ರಿವ್ಯೂ ಮಾಡಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆಗಿಂದಾಗ್ಗೆ ಈ ಇಲಾಖೆಯನ್ನು ರಿವ್ಯೂ ಮಾಡುತ್ತಿದ್ದಾರೆಂದು ನನ್ನ ಅನಿಸಿಕೆ. ಹಾಗೇನಾದರೂ ರಿವ್ಯೂ ಆಗಿಲ್ಲದಿದ್ದರೆ ಅದನ್ನು ರಿವ್ಯೂ ಮಾಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಪ್ರಾಜೆಕ್ಟ್ ಕೋ-ಆರ್ಡಿನೇಟರ್ ಎನ್ನತಕ್ಕ ಹುದ್ದೆ ಮತ್ತು ಅಡ್ಮಿನಿಸ್ಟ್ರೇಟರ್ ಎನ್ನತಕ್ಕ ಹುದ್ದೆಗಳು ಎರಡೂ ಕೂಡ ಒಂದೇ ದರ್ಜೆಯ ಹುದ್ದೆಗಳಾಗಿರುವುದರಿಂದ ಈ ಎರಡೂ ಹುದ್ದೆಗಳ ಕೆಲಸವೂ ಕೂಡ ಒಂದೇ ಆಗಿರುವುದರಿಂದ ಇವೆರಡೂ ಹುದ್ದೆಗಳನ್ನೂ ಕ್ಲಬ್ ಮಾಡಿ ಒಂದೇ ಹುದ್ದೆಯನ್ನಾಗಿ ಮಾಡಿದರೆ ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯವಾಗುತ್ತದೆಂದು ನನ್ನ ಸಲಹೆ . ಆದ್ದರಿಂದ ಸರ್ಕಾರ ಇದರ ಬಗ್ಗೆ ಯೋಚನೆ ಮಾಡಬೇಕು.

ಶ್ರೀ ಎಸ್. ಎಂ. ಕೃಷ್ಣ : ಮಾನ್ಯ ಸದಸ್ಯರು ತಮ್ಮ ಅನುಭವದ ಹಿನ್ನೆಲೆಯಲ್ಲಿ ಈ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಸರ್ಕಾರ ಅವರ ಸಲಹೆಯನ್ನು ಬಹಳ ಗೌರವದಿಂದ ಗಮನಿಸುತ್ತದೆಂದು ಹೇಳಬಯಸುತ್ತೇನೆ.

ವಿಷಯ : ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸುವುದು.

Q : 1423

ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸಲು ಸರ್ಕಾರದಲ್ಲಿ ಯಾವುದಾದರೂ ಪ್ರಸ್ತಾವನೆ ಇದೆಯೇ?

ಆ) ಹಾಗಿದ್ದಲ್ಲಿ, ರಸ್ತೆಗಳ ಹೆಸರು (ಜಿಲ್ಲೆಗಳನ್ನು ಒಳಗೊಂಡಂತೆ) ಹಾಗೂ ಒಟ್ಟು ಉದ್ದ ಸೇರಿದಂತೆ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು)

ಆ) ಹೌದು.
ಆ) ಪಟ್ಟಿಯನ್ನು ಲಗತ್ತಿಸಲಾಗಿದೆ.

ಕರ್ನಾಟಕ ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸಲು ಪ್ರಸ್ತಾಪಿಸಲಾಗಿರುವ ರಸ್ತೆಗಳ ಪಟ್ಟಿ .

ಕ್ರ. ಸಂ.	ರಾಷ್ಟ್ರೀಯ ಹೆದ್ದಾರಿಯಾಗಿ ಘೋಷಿಸುವಂತೆ ಕೋರಿರುವ ರಾಜ್ಯ ಹೆದ್ದಾರಿಗಳು.	ಈ ರಸ್ತೆಗಳು ಹಾದು ಹೋಗುವ ಜಿಲ್ಲೆಗಳು.	ಉದ್ದ (ಕಿ.ಮೀ.)
1.	ಆಂಧ್ರ ಪ್ರದೇಶದ ಗೂಟಿಯಿಂದ ಗುಂಟಕಲ್ ಬಳ್ಳಾರಿ -ಹೊಸಪೇಟೆ -ಕೊಪ್ಪಳ-ಗದಗ್- ಹುಬ್ಬಳ್ಳಿ - ಕಾರವಾರ (ರಾಷ್ಟ್ರೀಯ ಹೆದ್ದಾರಿ 17ನ್ನು ಸೇರುವಂತೆ)	ಬಳ್ಳಾರಿ-ರಾಯಚೂರು ಧಾರವಾಡ ಮತ್ತು ಉತ್ತರ ಕನ್ನಡ .	422
2.	ಬೆಂಗಳೂರು - ಮೈಸೂರು - ನಂಜನಗೂಡು- ಗುಂಡ್ಲುಪೇಟೆ-ಊಟಿ-ಕೊಯಮತ್ತೂರು (ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 47ನ್ನು ತಮಿಳು ನಾಡಿನಲ್ಲಿ ಸೇರುವಂತೆ)	ಬೆಂಗಳೂರು, ಮಂಡ್ಯ ಮತ್ತು ಮೈಸೂರು	220
3.	ಮೈಸೂರು - ಶ್ರೀ ರಂಗಪಟ್ಟಣ - ನಾಗಮಂಗಲ- ಚಿಕ್ಕನಾಯಕನಹಳ್ಳಿ -ಹುಳಿಯಾರು-ಹಿರಿಯೂರು -ಬಳ್ಳಾರಿ-ಷಹಪುರ-ಗುಲ್ಬರ್ಗಾ - ಹಮ್ನಾಬಾದ್ - (ರಾಷ್ಟ್ರೀಯ ಹೆದ್ದಾರಿ 9ನ್ನು ಸೇರುವಂತೆ)	ಮೈಸೂರು, ಮಂಡ್ಯ, ತುಮಕೂರು, ಚಿತ್ರದುರ್ಗ ಬಳ್ಳಾರಿ , ರಾಯಚೂರು, ಗುಲ್ಬರ್ಗಾ ಮತ್ತು ಬೀದರ್.	678
4.	ತುಮಕೂರು-ಅರಸೀಕೆರೆ-ಶಿವಮೊಗ್ಗ-ಸಾಗರ- ಹೊನ್ನಾವರ-(ರಾಷ್ಟ್ರೀಯ ಹೆದ್ದಾರಿ 17ನ್ನು ಸೇರುವಂತೆ)	ತುಮಕೂರು, ಹಾಸನ, ಶಿವಮೊಗ್ಗ, ಮತ್ತು ಉತ್ತರ ಕನ್ನಡ.	332
5.	ಬೆಂಗಳೂರು-ಮೈಸೂರು-ಮಡಿಕೇರಿ-ಮಂಗಳೂರು (ರಾಷ್ಟ್ರೀಯ ಹೆದ್ದಾರಿ 17ನ್ನು ಸೇರುವಂತೆ)	ಬೆಂಗಳೂರು, ಮಂಡ್ಯ, ಮೈಸೂರು, ಕೊಡಗು ಮತ್ತು ದಕ್ಷಿಣ ಕನ್ನಡ.	385
6.	ಬೆಳಗಾಂ-ಬಿಜಾಪುರ-ಗುಲ್ಬರ್ಗಾ -ಹುಮ್ನಾಬಾದ್ (ರಾಷ್ಟ್ರೀಯ ಹೆದ್ದಾರಿ 9ನ್ನು ಸೇರುವಂತೆ)	ಬೆಳಗಾಂ, ಬಿಜಾಪುರ, ಗುಲ್ಬರ್ಗಾ, ಮತ್ತು ಬೀದರ್	364

7. ಬೆಳಗಾಂ-ಬಾಗಲ್‌ಕೋಟೆ-ರಾಯಚೂರು-ಆಂಧ್ರಪ್ರದೇಶದಲ್ಲಿನ ಮೆಹಬೂಬ್ ನಗರ.	::	ಬೆಳಗಾಂ, ಬಿಜಾಪುರ ಮತ್ತು ರಾಯಚೂರು.	336
8. ಚಿತ್ರದುರ್ಗ -ಹೊಳಲ್ಕೆರೆ-ಹೊಸದುರ್ಗ-ಚಿಕ್ಕಮಗಳೂರು-ಮೂಡಿಗೆರೆ-ಬೆಳ್ತಂಗಡಿ-ಬಂಟ್ವಾಳ-ಮಂಗಳೂರು. (ರಾಷ್ಟ್ರೀಯ ಹೆದ್ದಾರಿ 17ನ್ನು ಸೇರುವಂತೆ)	::	ಚಿತ್ರದುರ್ಗ, ಚಿಕ್ಕಮಗಳೂರು ಮತ್ತು ದಕ್ಷಿಣ ಕನ್ನಡ.	283
9. ಧಾರವಾಡ - ಲೋಂಡಾ-ಅನ್‌ಮೋದ್-ಪಣಜಿ (ರಾಷ್ಟ್ರೀಯ ಹೆದ್ದಾರಿ 17ನ್ನು ಸೇರುವಂತೆ)	::	ಉತ್ತರ ಕನ್ನಡ ಮತ್ತು ಧಾರವಾಡ.	95
10. ಪಡುಬಿದ್ರಿ - ಕಾರ್ಕಳ-ಶೃಂಗೇರಿ-ತೀರ್ಥಹಳ್ಳಿ-ಷಿಕಾರಿಪುರ-ಶಿರಾಳ್‌ಕೊಪ್ಪ-ಹುಬ್ಬಳ್ಳಿ- ಬಾಗಲ್‌ಕೋಟೆ-ಹುನಗುಂದ.	::	ದಕ್ಷಿಣ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ ಧಾರವಾಡ, ಬಿಜಾಪುರ ಮತ್ತು ಬೀದರ್.	550
11. ಶಿರಾ-(ಬೆಂಗಳೂರು - ಪೂನಾ ರಾಷ್ಟ್ರೀಯ ಹೆದ್ದಾರಿ ನಂ.4ರ ಮೇಲೆ) ಮಧುಗಿರಿ- ಗೌರಿಬಿದನೂರು-ಚಿಕ್ಕಬಳ್ಳಾಪುರ-ಚಿಂತಾಮಣಿ-ಶ್ರೀನಿವಾಸಪುರ-ಮುಳಬಾಗಿಲು(ಬೆಂಗಳೂರು-ಮದ್ರಾಸ್ ರಾಷ್ಟ್ರೀಯ ಹೆದ್ದಾರಿ-4ರ ಮೇಲೆ)	::	ತುಮಕೂರು ಮತ್ತು ಕೋಲಾರ.	160
12. ಚಿತ್ರದುರ್ಗ - ಶಿವಮೊಗ್ಗ- ಸಕಲೇಶಪುರ-ಮಡಿಕೇರಿ ಹಾಗೂ ಕೇರಳದಲ್ಲಿರುವ ತಲ್ಲಿಚೇರಿ	::	ಚಿತ್ರದುರ್ಗ- ಶಿವಮೊಗ್ಗ-ಚಿಕ್ಕಮಗಳೂರು- ಹಾಸನ ಮತ್ತು ಕೊಡಗು.	325
13. ಬೆಂಗಳೂರು-ಕನಕಪುರ - ಮಳವಳ್ಳಿ - ನಂಜನಗೂಡು-ಸುಲ್ತಾನಬತ್ತೇರಿ-ಹಾಗೂ ಕೇರಳದಲ್ಲಿರುವ ಕಲ್ಲಿಕೋಟೆ.	::	ಬೆಂಗಳೂರು, ಮಂಡ್ಯ ಮತ್ತು ಮೈಸೂರು.	250
		ಒಟ್ಟುಉದ್ದ	4,400 ಕಿ.ಮಿ.

ಶ್ರೀ ನಾರಾಯಣರಾವ್ ಮನಹಳ್ಳಿ : ಮಾನ್ಯ ಅಧ್ಯಕ್ಷರೆ, ರಾಜ್ಯದ ಮಾರ್ಗ ಯಾವುದು ಕೆಟ್ಟು ಹೋಗಿದೆ ಅದನ್ನು ರಾಷ್ಟ್ರೀಯ ಮಾರ್ಗವಾಗಿ ಪರಿವರ್ತನೆ ಮಾಡುವ ಸಲುವಾಗಿ ಕೇಂದ್ರಸರ್ಕಾರಕ್ಕೆ ರಾಜ್ಯಸರ್ಕಾರ 4400 ಕಿ.ಮೀ. ರಸ್ತೆಯನ್ನು ಒಪ್ಪಿಸಿದೆ ಎಂದು ಹೇಳಿದೆ. ಆದರೆ ಈ ಕೆಲಸ ಯಾವಾಗ ಪ್ರಾರಂಭವಾಗುತ್ತದೆ ಮತ್ತು ಎಷ್ಟು ಅವಧಿಯಲ್ಲಿ ಮುಗಿಯುತ್ತದೆಂಬುದನ್ನು ಸ್ಪಷ್ಟವಾಗಿ ತಿಳಿಸಬೇಕೆಂದು ಮಾನ್ಯ ಮಂತ್ರಿಗಳನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರ ತನ್ನ ಒಪ್ಪಿಗೆಯನ್ನು ಕೊಟ್ಟು, ಹಣವನ್ನು ಒದಗಿಸಿದ ನಂತರ ಈ ರಾಷ್ಟ್ರೀಯ ಹೆದ್ದಾರಿ ಕೆಲಸ ಪ್ರಾರಂಭವಾಗುತ್ತದೆ. ನಾವು ಈ ಬಗ್ಗೆ ಬಹಳ ಹಿಂದೆಯೇ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿದ್ದೇವೆ. ನಮಗಿರತಕ್ಕ ರಾಷ್ಟ್ರೀಯ ಹೆದ್ದಾರಿ ನಮಗೆ ಸಾಕು ಎಂದು ನಾವೇನೂ ತೃಪ್ತಿಪಟ್ಟು ಕೊಂಡಿಲ್ಲ. 1961 ಮತ್ತು 81ರ ಮುಂಬಯಿ ಯೋಜನೆಯ ಪ್ರಕಾರ ರಾಷ್ಟ್ರೀಯ ಹೆದ್ದಾರಿ ಪ್ರಕಾರ ನಮ್ಮ ರಾಜ್ಯದಲ್ಲಿ 3215 ಕಿ. ಮಿ. ಇರಬೇಕಾಗಿತ್ತು. ನಂತರ 81ರಲ್ಲಿ ಪರಿಷ್ಕರಣ ಮಾಡಿದ ಮೇಲೆ 81ರಿಂದ 2001ನೇ ಇಸವಿಯೊಳಗೆ ಸುಮಾರು 3836 ಕಿ. ಮಿ. ರಸ್ತೆ ಇರಬೇಕಾಗಿದೆ. 1972ನೇ ಇಸವಿಯಿಂದೀಚೆಗೆ 1 ಕಿ. ಮಿ. ರಸ್ತೆಯನ್ನೂ ಕೂಡ ನಮಗೆ ಕೇಂದ್ರಸರ್ಕಾರದವರು ಹೊಸದಾಗಿ ಮಂಜೂರಾತಿ ಕೊಟ್ಟಿಲ್ಲ. ಇದುವರೆಗೆ ನಮ್ಮ ಬೇಡಿಕೆ ಅವಶ್ಯಕತೆ ಪೂರೈಕೆ ಆಗಿಲ್ಲ. ಆದರೂ ರಾಜ್ಯಸರ್ಕಾರದವರು ಆಗಿಂದಾಗ್ಗೆ ಒತ್ತಾಯ ಮಾಡುತ್ತಲೇ ಇದ್ದೇವೆ. ನಾನು ಇದರ ಬಗ್ಗೆ ಇಲ್ಲಿ ಒಂದು ಪಟ್ಟಿಯನ್ನು ಕೊಟ್ಟಿದ್ದೇನೆ. ಬಹಳ ಪ್ರಮುಖವಾದ ರಸ್ತೆಗಳು ಯಾವುವು, ಅವುಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂಬುದನ್ನು ನಾವು ಮೇಲಿಂದ ಮೇಲೆ ಪ್ರಸ್ತಾಪ ಮಾಡುತ್ತಿದ್ದೇವೆ. ಈ ದಿಸೆಯಲ್ಲಿ ನಮ್ಮ ಸರ್ಕಾರ ಎಲ್ಲ ಪ್ರಯತ್ನವನ್ನೂ ಮಾಡುತ್ತಿದೆ. ಮಾನ್ಯ ಮುಖ್ಯ ಮಂತ್ರಿಗಳು ಅಧಿಕಾರ ವಹಿಸಿಕೊಂಡ ತಕ್ಷಣ ಡಿಸೆಂಬರ್ ತಿಂಗಳಲ್ಲಿ ಕೇಂದ್ರದ ಸಂಬಂಧಪಟ್ಟ ಮಂತ್ರಿಗಳಿಗೆ ಪತ್ರವನ್ನು ಬರೆದಿದ್ದಾರೆ. ನಾನೂ ಕೂಡ ಮತ್ತೆ ಬರೆಯುತ್ತೇನೆ. ಮತ್ತೊಮ್ಮೆ ಮಾನ್ಯ ಮುಖ್ಯಮಂತ್ರಿಗಳಿಂದ ಪತ್ರ ಬರೆಸಿ ಒತ್ತಾಯ ತರತಕ್ಕಂಥ ಅವಶ್ಯಕತೆ ಇದೆ. ಅದನ್ನು ಮಾಡುತ್ತೇನೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೂ ಹಾಗೂ ಸದನಕ್ಕೆ ತಿಳಿಸಬಯಸುತ್ತೇನೆ.

ಶ್ರೀ ನಾರಾಯಣರಾವ್ ಮನಹಳ್ಳಿ : ಶ್ರೀರಂಗಪಟ್ಟಣದಿಂದ ಬೀದರ್‌ವರೆಗಿನ ರಸ್ತೆಯ ಬಗ್ಗೆ ಮಾನ್ಯ ಮಂತ್ರಿಗಳು ಒಂದು ಸಾರಿ ಹೇಳಿಕೆಯನ್ನು ಕೊಟ್ಟಿದ್ದು ಎಲ್ಲಾ ಪತ್ರಿಕೆಗಳಲ್ಲೂ ಬಂತು. ರೇಡಿಯೋಗಳಲ್ಲೂ ಬಂತು. ಅದರ ಪ್ರಕಾರ ಜನರು ಈ ಕೆಲಸ ಆಗಿಹೋಗಿದೆ ಎಂದು ತಿಳಿದುಕೊಂಡಿದ್ದಾರೆ. ಆದರೆ ಈ ರಸ್ತೆಯ ಮೇಂಟೆನೆನ್ಸ್ ಬಹಳವಾಗಿ ಕೆಟ್ಟುಹೋಗಿದೆ. ಇದು ಸುಮಾರು ಆರುನೂರು ಚಿಲ್ಲರೆ ಕಿ. ಮಿ. ಉದ್ದದ ರಸ್ತೆ. ಇದು ನನ್ನ ಕ್ಷೇತ್ರ ಮತ್ತು ನಿಮ್ಮ ಕ್ಷೇತ್ರದ ಮೇಲೂ ಹೋಗುವ ರಸ್ತೆ. ಈ ರಸ್ತೆಗೆ ಅಸ್ಫಾಲ್ಟ್ ಆಗಿ ಸುಮಾರು 30 ವರ್ಷವಾಗಿದೆ. ಇದುವರೆಗೂ ಇದರ ಮೇಂಟೆನೆನ್ಸ್ ಆಗಿಲ್ಲ. ಈಗಲಾದರೂ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಕೆ. ಹೆಚ್. ರಂಗನಾಥ್ : ಇದಕ್ಕೆ ಆದ್ಯತೆಯನ್ನು ಕೊಡಬೇಕೆಂದು ಬಹಳ ಹಿಂದೆ ನಾನು ಪ್ರಸ್ತಾಪ ಮಾಡಿದ್ದೆ. ಅದು ಪತ್ರಿಕೆಗಳಲ್ಲಿ ಬಂದಿದೆ. ಈಗಲೂ ಕೂಡ ಇದಕ್ಕೆ ಹೆಚ್ಚಿನ ಆದ್ಯತೆ ಕೊಟ್ಟು ಕೆಲಸಮಾಡಬೇಕೆಂದು ಹೇಳುತ್ತೇವೆ. ಈ ರಸ್ತೆ ಹಾಳಾಗಿದೆ ಎಂಬ ಮಾತನ್ನು ತಾವು ಹೇಳುತ್ತಿದ್ದೀರಿ. ಇದು ವಾಸ್ತವಾಂಶ ನನಗೆ ತಿಳಿದ ಮಟ್ಟಿಗೆ ಸುಮಾರು 10-12 ವರ್ಷಗಳಿಂದ ರಿಪೇರಿ ಆಗಿಲ್ಲ. ನಾನೂ ಕೂಡ ಈ ರಸ್ತೆಯಲ್ಲಿ ಆಗಿಂದಾಗ್ಗೆ ಓಡಾಡುತ್ತಿರುವುದರಿಂದ ಇದನ್ನು ನೋಡಿದ್ದೇನೆ.

10.45 ಎ.ಎಂ

ರಾಜ್ಯದ ಹೆದ್ದಾರಿಯಾಗಿ ಏನು ಮಾಡಬೇಕು. ಆ ಕೆಲಸವನ್ನು ಮಾಡುತ್ತೇವೆಂದು ಈ ಸಭೆಗೆ ಹೇಳಬಯಸುತ್ತೇನೆ.

ಶ್ರೀ ಮಲ್ಲಾರಿಗೌಡ. ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಮಂತ್ರಿಗಳು ಹೇಳಿದ ಪ್ರಕಾರ ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿಗಳ ಸಂಖ್ಯೆ ಒಂದು ಮೈಲಿಯೂ ಹೆಚ್ಚಾಗಿಲ್ಲ. ನಾನು ಕಳೆದ ಬಾರಿಯೂ ಕೂಡ ಒತ್ತಾಯ ಮಾಡಿದ್ದೇನೆ. ಬೆಂಗಳೂರ್, ಲಾಟಿ ಸಂಕೇಶ್ವರ, ಜೇವರ್ಗಿ, ಗುಲ್ಬರ್ಗಾ ವಿಶಾಖಪಟ್ಟಣ ಈ ರಸ್ತೆಯನ್ನು ಈಸ್ಟ್ ವೆಸ್ಟ್ ರಸ್ತೆಯನ್ನಾಗಿ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಕನ್‌ವರ್ಟ್ ಮಾಡಬೇಕೆಂದು ಹೇಳಿದ್ದೇನೆ. ಧಯವಿಟ್ಟು ಆ ದೃಷ್ಟಿಯಿಂದಲೂ ತಾವು ಪ್ರಯತ್ನ ಮಾಡಬೇಕು. ಅದೂ ಅಲ್ಲದೇ ನಾವು ಹಲವಾರು ಸಲ ಶಾಸಕರಾಗಿ ತಿರುಗಾಡುವ ಕಾಲಕ್ಕೆ ರಾಷ್ಟ್ರೀಯ ಹೆದ್ದಾರಿಯ ಮೇಲಾಗಲಿ ಅಥವಾ ಇನ್ನುಳಿದ ಹೆದ್ದಾರಿಗಳ ಮೇಲೆ ಕೊನೆ ಪಕ್ಷ 25 ಕಿಲೋಮಿಟರ್‌ಗೆ ಒಂದಾದರೂ ಬೋರ್‌ವೆಲ್ಲನ್ನು ಹಾಕಬೇಕು. ಏತಕ್ಕೆಂದರೆ, ಎಷ್ಟೋ ಜನ ದನಕಾಯುವಂಥ ಮಕ್ಕಳು ನೀರಿಗಾಗಿ ಕೈಹಿಡಿದುಕೊಂಡು ನಿಂತಿರುತ್ತಾರೆ. ಕೇಳುತ್ತಿರುತ್ತಾರೆ ಆದ್ದರಿಂದ ತಮ್ಮ ಇಲಾಖೆಯ ವತಿಯಿಂದ 25 ಕಿಲೋಮಿಟರ್‌ಗೆ ಮಾಡಬೇಕು. ಮಾನ್ಯ ಸಿಂಧ್ಯರವರು ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಇದ್ದಾಗ, 50 ಕಿ. ಮಿ.ಗೆ ಒಂದೊಂದು ಬೋರ್ ಹಾಕತಕ್ಕಂಥ ಮತ್ತು ರೆಸ್ಟ್‌ಪ್ಲೇಸ್ ಎಂದು 50 ಕಿಲೋಮಿಟರ್‌ಗೆ ಒಂದು ರೆಸ್ಟ್ ಪ್ಲೇಸ್ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಸೂಚನೆ ಮಾಡಿದ್ದರು. ಅದನ್ನೂ ಕೂಡ ಅವರು ಒಪ್ಪಿದ್ದಾರೆ, ಅದರ ಬಗ್ಗೆ ತಾವು ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರೆಂದು ತಮ್ಮ ಮುಖೇನ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ರಾಷ್ಟ್ರೀಯ ಹೆದ್ದಾರಿ ಒಂದು ಕಿಲೋಮಿಟರ್‌ನಷ್ಟು ಕೇಂದ್ರ ಸರ್ಕಾರದವರು ನಮಗೆ ಕೊಟ್ಟಿಲ್ಲವೆಂದು ತಾವು ಹೇಳಿದಿರಿ. 1972-82-92 ಅಂದರೆ, 22 ವರ್ಷಗಳು ಕಳೆಯಿತು. ಅಂದರೆ, ಕೇಂದ್ರ ಸರ್ಕಾರದವರಿಗೆ ಕರ್ನಾಟಕದ ಮೇಲೆ ಮಲತಾಯಿ ಧೋರಣೆಯೇ? ಅಥವಾ ನಮ್ಮ ಸರ್ಕಾರದವರ ಒಂದು ಒತ್ತಡವಿಲ್ಲವೋ ಅಥವಾ ನಮ್ಮ ನಾಯಕತ್ವದ ಪ್ರಭಾವ ಕೇಂದ್ರದ ಮೇಲೆ ಇಲ್ಲವೋ. ಇದನ್ನು ದಯವಿಟ್ಟು ಹೇಳಬೇಕು. ಅನೇಕ ವಿಚಾರಗಳಲ್ಲಿ ನಾವು ಹಿಂದೆ ಬಿದ್ದಿದ್ದೇವೆ, ರೈಲ್ವೆಯಲ್ಲಿ ಹಿಂದೆ ಬಿದ್ದಿದ್ದೇವೆ, ವಿಜಯನಗರದ ಬಗ್ಗೆ ಹಿಂದೆ ಬಿದ್ದಿದ್ದೇವೆ. ಕೊನೆಯ ಪಕ್ಷ ರಾಷ್ಟ್ರೀಯ ಹೆದ್ದಾರಿಯ ಬಗ್ಗೆ ಕಟುಸತ್ಯವನ್ನು ತಾವು ಹೇಳಿದ್ದೀರಿ. ದಯವಿಟ್ಟು ಸರ್ಕಾರದವರು ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂಬುದನ್ನು ತಾವು ಹೇಳಬೇಕು;

ಶ್ರೀ ಕೆ. ಹೆಚ್. ರಂಗನಾಥ್ : ರೈಲ್ವೆನಲ್ಲಿ ನಾವೇನು ಹಿಂದೆ ಬಿದ್ದಿಲ್ಲ. ರೈಲ್ವೆಯಲ್ಲಿ ಸುಮಾರು 1000 ಕಿಲೋಮಿಟರ್ ಕನ್‌ವರ್ಷನ್ ಆಗುತ್ತದೆ. ಹಿಂದೆ ಬಿದ್ದಿದ್ದೇವೆ. ಮದ್ಯೆ ವಿಂಧ್ಯಪರ್ವತ ಇರುವುದರಿಂದ ಡೆಲ್ಲಿಗೆ ನಾವು ಇರತಕ್ಕ ಜಾಗ ಸರಿಯಾಗಿ ಕಾಣುವುದಿಲ್ಲ.

ಹಾಗಾಗಿ ಸ್ವಲ್ಪ ತೊಂದರೆಯಾಗಿದೆ.

ಶ್ರೀ ವಾಟಾಳ್ ನಾಗರಾಜ್ : ತಾವು ಅಲ್ಲಿಗೆ ಕಾಣುವುದಕ್ಕೆ ಏನಾದರೂ ಒಂದು ವ್ಯವಸ್ಥೆಯನ್ನು ಮಾಡಿ.

ಅಧ್ಯಕ್ಷರು : ತಾವು ಕುಳಿತುಕೊಳ್ಳಿ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಅಪ್ರತ್ಯಕ್ಷವಾಗಿ ಮಾನ್ಯ ಮಂತ್ರಿಗಳು ಕೇಂದ್ರ ಸರ್ಕಾರದ ಒಂದು ಮಲತಾಯಿ ಧೋರಣೆಯನ್ನು ಒಪ್ಪಿದ್ದಾರೆ. ನಾನಾದರೂ ತಮಗೆ ಮನವಿ ಮಾಡಿಕೊಳ್ಳುವುದು ಒಂದೇ.

ಶ್ರೀ ಕೆ. ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ನಾನು ಎಲ್ಲಿ ಒಪ್ಪಿದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ : ನಾನಾದರೂ ತಮ್ಮಲ್ಲಿ ಮನವಿ ಮಾಡಿಕೊಳ್ಳುವುದು ಇಷ್ಟೇ. ಕೇಂದ್ರ ಸರ್ಕಾರದವರು 1972ರ ನಂತರ 1993ನೇ ಇಸವಿಯವರೆಗೂ ಇಡೀ ರಾಷ್ಟ್ರದಲ್ಲಿ ಎಷ್ಟು ರಾಷ್ಟ್ರೀಯ ಹೆದ್ದಾರಿಯನ್ನು ಮಾಡಿದ್ದಾರೆ. ಯಾವ ಯಾವ ರಾಜ್ಯಗಳಲ್ಲಿ ಮಾಡಿದ್ದಾರೆ ಎನ್ನುವ ಮಾಹಿತಿಯನ್ನು ದಯವಿಟ್ಟು ಸದನಕ್ಕೆ ದಯಪಾಲಿಸಬೇಕೆಂದು ತಮ್ಮಲಿ ವಿನಂತಿ ಮಾಡಿಕೊಳ್ಳುತ್ತೇನೆ.

Sri. K. H. Ranganath : I Want notice for that.

ವಿಷಯ : ರಾಜ್ಯದಲ್ಲಿ ರೈತರ ಪಂಪುಸೆಟ್ಟುಗಳಿಗೆ ಮೀಟರ್.

Q : 1256

ಶ್ರೀ ಹು. ಯು. ಮೇಟಿ (ಗುಳೇದಗುಡ್ಡ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ರೈತರ ಪಂಪುಸೆಟ್ಟುಗಳಿಗೆ ವಿದ್ಯುತ್ ಮೀಟರ್ ಅಳವಡಿಸುವ ಯೋಜನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಸದರಿ ಮೀಟರ್ ಅಳವಡಿಸಲು ಬೇಕಾಗುವ ಹಣವೆಷ್ಟು?

ಇ) ಮೀಟರ್ ಅಳವಡಿಸಿ ಮೀಟರ್ ದರದಲ್ಲಿ ಬಿಲ್ ಪಾವತಿ ಮಾಡುವಂತೆ ಜಾರಿಗೆ ತರುವುದರಿಂದ ರೈತರ ವಿರುದ್ಧ ಧೋರಣೆ ತಾಳಲಿಲ್ಲವೇ?

ಈ) ಹಾಗಿದ್ದಲ್ಲಿ, ರೈತರ ಪಂಪುಸೆಟ್ಟುಗಳಿಗೆ ಮೀಟರ್ ಅಳವಡಿಸುವುದನ್ನು ಕೈ ಬಿಡಲು ಸರ್ಕಾರದವರು ಯೋಜಿಸುವರೇ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :